# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕಾರ್ಯದರ್ಶಿ, ರಾಜ್ಯ ಯೋಜನಾ ಮಂಡಳಿ ಇವರಿಗೆ 2015ನೇ ಸಾಲಿನಲ್ಲಿ ವಾರ್ಷಿಕ ವೈದ್ಯಕೀಯ ತಪಾಸಣಾ ವೆಚ್ಚದ ಮರು ಪಾವತಿ ಬಗ್ಗೆ.

**ಓದಲಾಗಿದೆ:** 1.ಅಧಿಕೃತ ಜ್ಞಾಪನ ಸಂಖ್ಯೆ: NO.21011/1/ 2009-estt(A)-part ದಿ:1.2.2012.
2.ಪತ್ರ ದಿನಾಂಕ 9.6.2015

**ಪ್ರಸ್ತಾವನೆ:**

ಕೇಂದ್ರ ನಾಗರಿಕ ಸೇವೆಗೆ ಒಳಪಟ್ಟ 40 ವರ್ಷ ಮೀರಿದ ಗ್ರೂಪ್-ಎ' ಪುರುಷ ಅಧಿಕಾರಿಗೆ ಗರಿಷ್ಠ ರೂ 2000/- ಹಾಗೂ 'ಗ್ರೂಪ್ ಎ'ಮಹಿಳಾ ಅಧಿಕಾರಿಗೆ ರೂ.2200/- ರಂತೆ ವಾರ್ಷಿಕ ವೈದ್ಯಕೀಯ ತಪಾಸಣೆ ವೆಚ್ಚ ಮರು ಪಾವತಿಸಲು ಮೇಲೆ (1)ರಲ್ಲಿ ಓದಲಾದ ಅಧಿಕೃತ ಜ್ಞಾಪನದಲ್ಲಿ ಮಂಜೂರಾತಿ ನೀಡಲಾಗಿದೆ. ಶ್ರೀಮತಿ ಅದಿಷಾ ಚೌಧುರಿ , ಕಾರ್ಯದರ್ಶಿ, ರಾಜ್ಯ ಯೋಜನಾ ಮಂಡಳಿ ಇವರು ಜಯದೇವ ಹೃದ್ರೋಗ ಆಸ್ಪತ್ರೆ ಬೆಂಗಳೂರು ಇಲ್ಲಿ ದಿನಾಂಕ: 06.06.2015 ರಂದು ವೈದ್ಯಕೀಯ ತಪಾಸಣೆ ಮಾಡಿಸಿಕೊಂಡಿದ್ದು, ಈ ಬಾಬ್ತು ತಗುಲಿದ ವೆಚ್ಚ ರೂ 1720/-ಗಳನ್ನು ಮರುಪಾವತಿಸುವಂತೆ ಕೋರಿ ಬಿಲ್ಲುಗಳನ್ನು (ಬಿಲ್ಲು ಸಂಖ್ಯೆ:ಆರ್ ಟಿ 2015151920 ದಿನಾಂಕ:06.06.15 & 664546 ದಿನಾಂಕ:06.06.15) ಸಲ್ಲಿಸಿರುತ್ತಾರೆ. ಈ ಬಗ್ಗೆ ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಪಿಡಿ 19(1) ಎಸ್‌ಪಿಎ 2015 ಬೆಂಗಳೂರು ದಿನಾಂಕ 18.06.2015**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀಮತಿ ಅದಿಷಾ ಚೌಧುರಿ, ಕಾರ್ಯದರ್ಶಿ, ರಾಜ್ಯ ಯೋಜನಾ ಮಂಡಳಿ ಇವರು 2015ನೇ ಸಾಲಿನಲ್ಲಿ ಜಯದೇವ ಹೃದ್ರೋಗ ಆಸ್ಪತ್ರೆ ಬೆಂಗಳೂರು ಇಲ್ಲಿ ವೈದ್ಯಕೀಯ ತಪಾಸಣೆ ಮಾಡಿಸಿಕೊಂಡಿರುವುದಕ್ಕೆ ತಗುಲಿದ ವೆಚ್ಚ ರೂ 1,720/-(ಒಂದು ಸಾವಿರದ ಏಳು ನೂರ ಇಪ್ಪತ್ತು ರೂಪಾಯಿಗಳು ಮಾತ್ರ) ಗಳನ್ನು ಸದರಿಯವರಿಗೆ ಮರುಪಾವತಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಈ ವೆಚ್ಚವನ್ನು ರಾಜ್ಯ ಯೋಜನಾ ಮಂಡಳಿಯ 2015-16ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ"3451-00-101-4-00-021 (ಯೋಜನೇತರ) ವೈದ್ಯಕೀಯ ಖರ್ಚು ಮರುಪಾವತಿ ಲೆಕ್ಕ ಶೀರ್ಷಿಕೆಯಡಿಯಲ್ಲಿ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಲಲಿತ)
ಸರ್ಕಾರದ ಅಧೀನ ಕಾರ್ಯದರ್ಶಿ (ಎಸ್-3)
ಯೋಜನೆ,ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

ಇವರಿಗೆ,

1 ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2 ಕಾರ್ಯದರ್ಶಿಗಳು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, .ವಿಧಾನ ಸೌಧ,ಬೆಂಗಳೂರು
3 ಕಾರ್ಯದರ್ಶಿಗಳು, ರಾಜ್ಯ ಯೋಜನಾ ಮಂಡಳಿ, ಬೆಂಗಳೂರು
4 ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು
5 ಸರ್ಕಾರದ ಅಧೀನ ಕಾರ್ಯದರ್ಶಿ (ಎಸ್ 1&2) ಯೋಜನೆ ಕಾರ್ಯಕ್ರಮ ಸಂಯೋಜನೆ & ಸಾಂಖ್ಯಿಕ ಇಲಾಖೆ ಬಹುಮಹಡಿ ಕಟ್ಟಡ ಬೆಂಗಳೂರು-01
6 ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು